# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಎಸ್.ಸಿ. ನಂ. 58/2025**

**ಪಿರ್ಯಾದಿ** – ಸರ್ಕಾರದ ಪರವಾಗಿ **ಹಿರಿಯೂರು ಗ್ರಾಮಾಂತರ** ಪೊಲೀಸರು

**– ವಿರುದ್ಧ –**

**ಆರೋಪಿ** – **ರಘು @ ಕುಳ್ಳ ಬಿನ್ ಲೇಟ್ ಕೃಷ್ಣಪ್ಪ,**
ವಯಸ್ಸು: 36 ವರ್ಷ, ಮಿಕ್ಸಿ ರಿಪೇರಿ,
ವಾಸಃ ನಂ. 19, 4 ನೇ ಅಂತಸ್ತು, ಏಕಲವ್ಯ ನಗರ,
ವಿಕ್ರಾಂತ ಟೈರ್ ಫ್ಯಾಕ್ಟರಿ ಹತ್ತಿರ, ಮೆಟಗಳ್ಳಿ, ಮೈಸೂರು

**–: ದೋಷಾರೋಪಣೆ :–**

**ಶ್ರೀ ಗಂಗಾಧರ ಚನ್ನಬಸಪ್ಪ ಹಡಪದ** 2 ನೇ *ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿತ್ರದುರ್ಗ* ಆದ ನಾನು **ರಘು** @ **ಕುಳ್ಳ** ಆದ ಆರೋಪಿಯಾದ ನಿನ್ನ ಮೇಲೆ ಈ ಕೆಳಕಂಡಂತೆ ಆರೋಪಿಸುವುದೇನೆಂದರೆಃ–

ಆರೋಪಿಯಾದ ನೀನು ದಿನಾಂಕ 13.12.2024 ರಂದು ಬೆಳಿಗ್ಗೆ 9.30 ಗಂಟೆಯಿಂದ 10.20 ಗಂಟೆಯ ಮಧ್ಯದ ಅವಧಿಯಲ್ಲಿ ಹಿರಿಯೂರು ತಾಲೂಕ ಆದಿವಾಲ ಫಾರಂ ಗ್ರಾಮದ ಶಿವಸ್ವಾಮಿ ತಂದೆ ಬಾಲಕೃಷ್ಣರವರ ಜಮೀನಿನಲ್ಲಿ ಸಾಕ್ಷಿ:9 ದೀಪಾರವರು ಕೆಲಸ ಮಾಡುತ್ತಿದ್ದಾಗ, ದರೋಡೆ ಮಾಡುವ ಉದ್ದೇಶದಿಂದ ಕಬ್ಬಿಣದ ರಾಡಿನಿಂದ ಅವರಿಗೆ ಹೊಡೆದಿದ್ದು, ಸಾಕ್ಷಿ:9 ರವರಿಗೆ ತೀವ್ರ ಸ್ವರೂಪದ ರಕ್ತಗಾಯಗಳಾಗಿದ್ದು, **ನನ್ನ ಸಂಜ್ಞಾನಕ್ಕೆ ಬರುವ, ಭಾರತೀಯ ನ್ಯಾಯ ಸಂಹಿತೆ ಕಲಂ 311 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ.**

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸಾಕ್ಷಿ:9 ದೀಪಾರವರಿಗೆ ಕಬ್ಬಿಣದ ರಾಡಿನಿಂದ ಹೊಡೆದು, ಅವರ ಕೊರಳಲ್ಲಿದ್ದ 40 ಗ್ರಾಂ ತೂಕದ ಬಂಗಾರದ ಮಾಂಗಲ್ಯ ಸರವನ್ನು

ಕಿತ್ತುಕೊಂಡು ಹೋಗಿದ್ದು **ನನ್ನ ಸಂಜ್ಞಾನಕ್ಕೆ ಬರುವ, ಭಾರತೀಯ ನ್ಯಾಯ ಸಂಹಿತೆ ಕಲಂ 309(4), 309(6) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ.**

ಈ ಮೇಲಿನ ಆಪಾದನೆಗಳಿಗೆ ನಿಮ್ಮ ಮೇಲೆ ವಿಚಾರಣೆ ನಡೆಸಲಾಗುವುದು.

**(ಗಂಗಾಧರ ಚನ್ನಬಸಪ್ಪ ಹಡಪದ)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ

# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಎಸ್.ಸಿ. ನಂ. 58/2025**

**ಪಿರ್ಯಾದಿ** – ಸರ್ಕಾರದ ಪರವಾಗಿ **ಹಿರಿಯೂರು ಗ್ರಾಮಾಂತರ** ಪೊಲೀಸರು

**– ವಿರುದ್ಧ –**

**ಆರೋಪಿ** – **ರಘು @ ಕುಳ್ಳ ಬಿನ್ ಲೇಟ್ ಕೃಷ್ಣಪ್ಪ,**
ವಯಸ್ಸು: 36 ವರ್ಷ, ವ್ಯಾಪಾರ,
ವಾಸಃ ನಂ. 19, 4 ನೇ ಅಂತಸ್ತು, ಏಕಲವ್ಯ ನಗರ,
ವಿಕ್ರಾಂತ ಟೈರ್ ಫ್ಯಾಕ್ಟರಿ ಹತ್ತಿರ, ಮೆಟಗಳ್ಳಿ, ಮೈಸೂರು

**–: ದೋಷಾರೋಪಣೆ :–**

1) ಈಗ ಕನ್ನಡದಲ್ಲಿ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೇ?

ಉತ್ತರಃ

2) ಈಗ ಓದಿ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀಯೇ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ

ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಅವನಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ವಿವರಿಸಿ ಹೇಳಿಲಾಯಿತು ಹಾಗೂ ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

**(ಗಂಗಾಧರ ಚನ್ನಬಸಪ್ಪ ಹಡಪದ)**
ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.